ಒಂಟಿಯಾಗಿಬಿಟ್ಟಳಲ್ಲ? ಅವಳ ಮುಖವನ್ನು ನೋಡಿ ನನಗೆ ತುಂಬಾ ಬೇಸರವಾಗಿತ್ತು.

***

ಒಂದೇ ಒಂದು ನಿಮಿಷ! ಏನೋ ಜ್ಞಾಪಕಕ್ಕೆ ಬರುತ್ತಿದೆ? ಇಂದು ಬೆಳಿಗ್ಗೆ ಎದ್ದಾಗಲೆ ಈ ದಿನ ಏನೊ ಕೆಟ್ಟ ಅಪಶಕುನ ನಡೆಯುತ್ತದೆ ಎಂದು ನನ್ನ ಮನಸ್ಸಿಗೆ ಹೊಳೆಯುತಿತ್ತು. ಎಪ್ಪತ್ತು ವರ್ಷಗಳ ಈ ವಯಸ್ಸಿನಲ್ಲಿ ಏನು ನಡೆದರೆ ಏನು ಎಂದು ಸುಮ್ಮನಾಗಿದ್ದೆ. ಆದರೂ ಸುಮ್ಮನೆ ಇರಲು ಮನಸ್ಸು ನನ್ನನ್ನು ಬಿಡಲಿಲ್ಲ. ಇಡೀ ದಿನ ಹಾಗೇ ಇತ್ತು. ಈಗ ನನ್ನ ಆರನೇ ಇಂದ್ರಿಯ ಸಕ್ರಿಯವಾಗುತ್ತಿದೆ. ನನ್ನ ಇಡೀ ದೇಹ ಬುದ್ಧಿ ತಳಮಳಗೊಳ್ಳುತ್ತಿದೆ. ನಾನು ಮರೆತಿದ್ದ ಯಾವುದೊ ಒಂದು ಮುಖ್ಯ ವಿಷಯ ನಿಮಗೆ ಹೇಳಲೇಬೇಕಾದ ವಿಷಯ ಜ್ಞಾಪಕಕ್ಕೆ ಬರುತ್ತಿದೆ. ತಡೆಯಿರಿ. ಒಂದೇ ಒಂದು ನಿಮಿಷ! ಇನ್ನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ನನ್ನ ಎರಡು ಕೈಗಳ ನಾಲ್ಕನೆ ಬೆರಳುಗಳಲ್ಲಿದ್ದ ಎರಡು ಉಂಗುರಗಳನ್ನು ಮತ್ತು ಕೈಯಲ್ಲಿದ್ದ ಸೋನಾ ಗಡಿಯಾರವನ್ನು ಬಿಚ್ಚಿದ ನನ್ನ ಬಾಮೈದ ಲೋಕೇಶ್ ನನ್ನ ಪತ್ನಿ ಸಾವಿತ್ರಿಯ ಕೈಗೆ ತಂದು ಕೊಟ್ಟ. ಎರಡು ಉಂಗುರಗಳಲ್ಲಿ ಒಂದನ್ನು ನನ್ನ ಅತ್ತೆ ಮಾವ ನನ್ನ ಮದುವೆಯಲ್ಲಿ ಹಾಕಿದ್ದರೆ, ಒಂದನ್ನು ಸಾವಿತ್ರಿಯೇ ನನಗೆ ಮಾಡಿಸಿಕೊಟ್ಟಿದ್ದಳು. ಗಡಿಯಾರ ನನ್ನ ಮಗಳು ದಮಯಂತಿ ಅಮೆರಿಕದಿಂದ ತಂದು ಕೊಟ್ಟಿದ್ದಳು. ಸಾವಿತ್ರಿ ಅವುಗಳನ್ನು ನೋಡಿ ದುಃಖಿಸುತ್ತಾ ತನ್ನ ಕೈಗೆ ತೆಗೆದುಕೊಳ್ಳದೆ ಪಕ್ಕದಲ್ಲಿದ್ದ ಲಕ್ಷ್ಮೀಯ ಕೈಗೆ ಕೊಡುವಂತೆ ಹೇಳಿ ಅದನ್ನು ಮನೆಯ ಒಳಗಿದ್ದ ಅಲ್ಮೆರಾದಲ್ಲಿ ಒಡವೆಗಳ ಜೊತೆಗೆ ಇಡುವಂತೆ ಹೇಳಿದಳು. ಲೋಕೇಶ್ ಕೈಯಿಂದ ಅವುಗಳನ್ನು ತೆಗೆದುಕೊಂಡ ಲಕ್ಷ್ಮೀ, ಸಾವಿತ್ರಿಯನ್ನು ಅಲ್ಮೆರಾ ಕೀ ಎಲ್ಲಿದೆ ಎಂದು ಕೇಳಿದಳು. ನನಗೆ ಗೊತ್ತಿಲ್ಲವಲ್ಲ? ಒಂದೆರಡು ಕ್ಷಣಗಳು ಆಲೋಚಿಸಿದ ಸಾವಿತ್ರಿ ಅಪ್ಪನ (ನನ್ನ) ಹಾಸಿಗೆ ಕೆಳಗಿದೆಯೇನೊ ನೋಡು ಲಕ್ಷ್ಮೀ ಎಂದರು. ನನ್ನನ್ನು ಹಾಸಿಗೆಯಿಂದು ಎತ್ತಿಕೊಂಡು ಸ್ನಾನ ಮಾಡಲು ತಯಾರಾಗುತ್ತಿದ್ದ ಸಮಯದಲ್ಲಿ ಲಕ್ಷ್ಮೀ ಗಂಡಸರ ಮಧ್ಯ ಹೋಗಿ ಹಾಸಿಗೆ ಕೆಳಗೆ ಇಲ್ಲದೆ ಲೋಕೇಶ್‌ಗೆ ಹೇಳಿದಳು. ಲೋಕೇಶ್ ಅಲ್ಲೆಲ್ಲ ನೋಡಿ ಇಲ್ಲ ಎಂದು ಹೇಳಿದ ಮೇಲೆ ಲಕ್ಷ್ಮೀ ಯಾವುದಕ್ಕೂ ನೋಡೋಣ ಎಂದು ಮನೆ ಒಳಗಡೆ ಹೋಗಿ ಅಲ್ಮೆರಾ ಮೇಲೆ ಕೈಯಾಡಿಸಿ ನೋಡಿದಳು. ಅಲ್ಲಿ ಕೀ ಇರಲಿಲ್ಲ. ಅಲ್ಮೆರಾ ಹಿಡಿಯನ್ನು ಹಿಡಿದು ತೆಗೆದಿದ್ದೆ ಅದು ಹಾಗೇ ತೆರೆದುಕೊಂಡಿತು.

ಲಕ್ಷ್ಮೀ ಎಂದಿನಂತೆ ಒಡವೆಗಳು ಮತ್ತು ಹಣ ಇರುತ್ತಿದ್ದ ಲಾಕರ್ ಎಳೆದು ನೋಡಿದಳು. ಅದೂ ಕೂಡ ತೆರೆದುಕೊಂಡಿದೆ? ತೆರೆದುಕೊಂಡಿದ್ದು. ಅದರಲ್ಲಿ ಒಂದು ಒಡವೆಯೂ ಇಲ್ಲ. ಹಣವೂ ಇಲ್ಲ. ಲಕ್ಷ್ಮೀಯ ಹೃದಯ ಒಮ್ಮೆಲೇ ಬಾಯಿಗೆ ಬಂದು ಏನು ಹೇಳಬೇಕೊ ಏನು ಮಾಡಬೇಕೊ ಒಂದು ಗೊತ್ತಾಗದೆ ದಿಢೀರನೆ ಮನೆಯಿಂದ ಹೊರಕ್ಕೆ ಬಂದು ಸಾವಿತ್ರಿಯ ಕಿವಿಯಲ್ಲಿ ಮೃದುವಾಗಿ ವಿಷಯವನ್ನು ಹೇಳಿದಳು. ಸಾವಿತ್ರಿಗೆ ಯಾವ ರೀತಿಯ ಪ್ರತಿಕ್ರಿಯೆ ನೀಡಬೇಕೊ ಒಂದೂ ಅರ್ಥವಾಗದೆ ಕೆಲವು ಕ್ಷಣಗಳು ತಲೆಯಲ್ಲಿನ ಫ್ಯೂಸ್ ಹೋದಂತೆ ತಲೆ ದಿಮ್ಮನಾಯಿತು. ಅನಂತರ ಜ್ಞಾನ ಬಂದ ಸಾವಿತ್ರಿ, ಲಕ್ಷ್ಮೀ ನಾರಾಯಣನಿಗೆ ಹೇಳು ಎಂದಳು. ಲಕ್ಷ್ಮೀ ತನ್ನ ಗಂಡ ನಾರಾಯಣನಿಗೆ ಹೇಳಿದಳು.

ನಾನು, ಸಾವಿತ್ರಿ ಇಬ್ಬರೂ ಬೆಂಗಳೂರಿನ ಮನೆಯಲ್ಲಿ ಇಲ್ಲದೆ ಇದ್ದಾಗ ಹಣ ಒಡವೆಗಳನ್ನು ಇಡುತ್ತಿರಲಿಲ್ಲ. ಹೆಚ್ಚು ಒಡವೆಗಳು ಇಲ್ಲದ ಕಾರಣ ಹಳ್ಳಿಯ ಫಾರ್ಮ್‌ಹೌಸ್‌ನಲ್ಲಿ ಕೆಲವನ್ನು ತಂದು ಇಡುತ್ತಿದ್ದೇವೆ. ಒಂದಷ್ಟು ಬೆಂಗಳೂರಿನ ಮನೆಯಲ್ಲೂ ಇಟ್ಟಿರುತ್ತಿದ್ದೇವೆ. ಸಾವಿತ್ರಿ ಉಳಿದ ಒಡವೆಗಳನ್ನು ಯಾವಾಗಲೂ ತನ್ನ ಅಂಗಾಂಗಳಿಗೆ ಹಾಕಿಕೊಂಡೆ ಓಡಾಡುತ್ತಿದ್ದಳು. ನಾರಾಯಣ ಓಡಿ ಬಂದು ಸಾವಿತ್ರಿಯ ಜೊತೆಗೆ ಮೆತ್ತಗೆ ಮಾತನಾಡಿ ಲಕ್ಷ್ಮೀ ಜೊತೆಗೆ ಮತ್ತೆ ಮನೆಯ ಒಳಗೋಗಿ ಅಲ್ಲಿ ಇಲ್ಲಿ ನೋಡಿದ. ಎಲ್ಲೂ ಏನೂ ಸಿಗಲಿಲ್ಲ. ನಾರಾಯಣನಿಗೆ ಈಗ ಎರಡನೇ ವಿಷಯ ಅರಿವಿಗೆ ಬಂದಿತು. ಒಂದು, ನಾನು ಕೊಲೆಯಾಗಿರುವುದು. ಎರಡು ಮನೆ ಒಳಗೆ ಒಡವೆ ಹಣ ಕಳ್ಳತನ ಆಗಿರುವುದು. ಹಣ ಒಡವೆ ಕಳ್ಳತನ ಮಾಡಲು ಕಳ್ಳರು ಮನೆಯ ಒಳಗೆ ನುಗ್ಗಿದಾಗ ನಾನು ಅವರಿಗೆ ಪ್ರತಿರೋಧ ತೋರಿ ಹತ್ಯೆಯಾಗಿರಬೇಕು? ಎಂಬ ಅನುಮಾನ ನಾರಾಯಣನ ಕಣ್ಣುಗಳಲ್ಲಿ ಎದ್ದು ಕಾಣಿಸುತ್ತಿತ್ತು. ಆದರೆ ಪಾಪ! ಅವನು ಈಗ ಏನೂ ಹೇಳುವಂತಿರಲಿಲ್ಲ.

ಲಕ್ಷ್ಮೀ ಮತ್ತು ನಾರಾಯಣ ಇಬ್ಬರೂ ತೀರಾ ಭೀತಿಗೊಳಗಾಗಿ ಮತ್ತೆ ಸಾವಿತ್ರಿಯ ಹತ್ತಿರಕ್ಕೆ ಬಂದರು. ಸಾವಿತ್ರಿ ಈಗ ಮನೆ ಒಳಕ್ಕೆ ಅವರ ಜೊತೆಗೆ ಎದ್ದು ಹೋಗಿ ಅಲ್ಮಾರಾ ತೆಗೆದು ಪರಿಶೀಲನೆ ಮಾಡಿ ಅದರ ಬಾಗಿಲು ಮುಚ್ಚಿ ಸದ್ಯಕ್ಕೆ ಯಾರಿಗೂ ಏನೂ ಹೇಳಬೇಡಿ ಎಂದು ಅದೇ ಜಾಗದಲ್ಲಿ ಬಂದು ಕುಳಿತುಕೊಂಡಳು. ಇದನ್ನು ಗಮನಿಸಿದ ಕೆಲವು ಜನರು ತಮ್ಮತಮ್ಮಲ್ಲೇ ಗುಸುಗುಸು ಮಾತನಾಡಿಕೊಳ್ಳುತ್ತ ಸಾವಿತ್ರಿ, ಲಕ್ಷ್ಮೀ ಮತ್ತು ನಾರಾಯಣನ ಕಡೆಗೆ ನೋಡತೊಡಗಿದರು. ಆದರೆ ಮೂವರೂ ಏನೂ ಹೇಳಲು ಸಿದ್ಧರಿರಲಿಲ್ಲ. ಯಾರಾದರೂ ಕೇಳಿದರೆ ಏನೂ ಇಲ್ಲ ಎಂದು ನನ್ನ ಅಂತಿಮ ಸಂಸ್ಕಾರದ ಕಡೆಗೆ ಕಣ್ಣು ನೆಟ್ಟರು. ಈಗ ನಾನು ಹತ್ಯೆಯಾದ ಒಂದೊಂದು ಕ್ಷಣದ ಚಿತ್ರಣವೂ ನನ್ನ ಆರನೇ ಇಂದ್ರಿಯ ಮೂಲಕ ನನ್ನ ಕಣ್ಣುಗಳ ಮುಂದೆ ಕಾಣಿಸುತ್ತಿತ್ತು. ನಗರಗಳಿಗಿಂತ ಹಳ್ಳಿ ಸುರಕ್ಷಿತ ಎಂದುಕೊಂಡಿದ್ದ ನನಗೆ, ಕೊನೆಗೆ ಹಳ್ಳಿಯ ಬದುಕೇ ಮುಳುವಾಗಿತ್ತು. ಆದರೆ ಒಂದು ಒಳ್ಳೆಯ ವಿಷಯವೆಂದರೆ ನಾನು ಹುಟ್ಟಿದ ಮಣ್ಣಿಗೆ ಬಂದು ಮತ್ತೆ ಸೇರಿಕೊಂಡಿದ್ದೆ. ಸಾವು ಯಾರಿಗೂ ತಪ್ಪಿದ್ದಲ್ಲ? ಇದಕ್ಕಿಂತ ಒಳ್ಳೆ ಸಾವು ಯಾರಿಗೆ ಉಂಟು! ಯಾರಿಗಿಲ್ಲ! ನಾರಾಯಣ!! ನಾರಾಯಣ!

***

ಈಗ ಎಲ್ಲರೂ ಒಮ್ಮೆಲೆ ಗುಂಡಿಯ ಸುತ್ತಲೂ ಬಿದ್ದಿದ್ದ ಕೆಂಪು ಮಣ್ಣನ್ನು ಬೇಗಬೇಗನೇ ತಮ್ಮತಮ್ಮ ಕೈಗಳಲ್ಲಿ ತೆಗೆದು ತೆಗೆದು ಮೂರು ಸಲ ನನ್ನ ಮೇಲೆ ಹಾಕಿದರು. `ಓಹ್ ಇರಿ. ಇರಿ. ಸ್ವಲ್ಪ ತಡೆಯಿರಿ. ಮತ್ತೆ ನಾನು ನಿಮಗೆ ಸಿಗುವುದಿಲ್ಲ. ನೀವು ನನಗೆ ಸಿಗುವುದಿಲ್ಲ. ನಿಮಗೆ ಹೇಳಬೇಕಾದ ಒಂದೆರಡು ಮಾತುಗಳು ಹಾಗೇ ನನ್ನಲ್ಲಿ ಉಳಿದುಕೊಂಡುಬಿಟ್ಟಿವೆ. **What is my achievement in this world?** ಎಂದರೆ ಬಹಳ ಸರಳವಾಗಿ ಸೊನ್ನೆ ಎನ್ನಬಹುದು. ನನ್ನ ಮಗಳು ಮತ್ತು ಮಗನಿಗಾಗಿ ನಾನು ಸಾಕಷ್ಟು ಶ್ರಮ ತೆಗೆದುಕೊಂಡು ಕೊನೆಗೆ ಅವರು ನನ್ನನ್ನು ನೋಡಲು ಬರಲೇ ಇಲ್ಲ. ಆದರೆ ಇದಕ್ಕೆಲ್ಲ ಕಾರಣ ನಾನೇ ಎನಿಸುತ್ತದೆ. ನಾನು ಸಾಕಷ್ಟು ಶ್ರಮವನ್ನು ತೆಗೆದುಕೊಂಡು ಅವರನ್ನು ಓದಿಸಿ, ಬೆಳೆಸಿ, ದೊಡ್ಡವರನ್ನಾಗಿಸಿ ಅಮೇರಿಕಾ ದೇಶಕ್ಕೆ ಧಾರೆ ಎರೆದಂತಾಯಿತು. ಆದರೆ ನಾನು ಹುಟ್ಟಿ ಬೆಳೆದ, ನನಗೆ ಎಲ್ಲವೂ ಕೊಟ್ಟ ನನ್ನ ದೇಶಕ್ಕೆ ನನ್ನಿಂದ, ನನ್ನ ಮಕ್ಕಳಿಂದ ಏನೂ ಲಾಭವಾಗಲಿಲ್ಲ. ನಾನು ನನ್ನ ದೇಶಕ್ಕೆ ಮೋಸ ಮಾಡಿಬಿಟ್ಟೆನಲ್ಲ ಎನಿಸುತ್ತಿದೆ.

ನನ್ನ ಮಕ್ಕಳನ್ನು ಚಿಕ್ಕಂದಿನಿಂದಲೇ ಹೊಡೆದು ಬಡಿದು ಕಷ್ಟ ಸುಖ ಏನೆಂಬುದನ್ನು ತೋರಿಸಿ ಸರಿಯಾದ ದಾರಿಯಲ್ಲಿ ಬೆಳೆಸಿ ಒಳ್ಳೆಯ ಅಧಿಕಾರಿಗಳೊ ವಿಜ್ಞಾನಿಗಳೊ ಕಲೆಗಾರರನ್ನಾಗಿಯೊ ಆಗಿಸಿದ್ದರೆ ಸಮಾಜಕ್ಕೆ ಸಹಾಯವಾಗುತ್ತಿತ್ತು. ಈಗ ನನಗೆ ತುಂಬಾ **Guilty** ಅಪರಾಧ ಭಾವನೆ ಕಾಡುತ್ತಿದೆ. ಈ ಸಮಾಜಕ್ಕೆ ನಾನು ಏನನ್ನೂ ಹಿಂದಿರುಗಿಸಲಿಲ್ಲ. ನನ್ನ ಮಾವನ ಜೊತೆಗೆ ಸೇರಿಕೊಂಡು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಭೌತಶಾಸ್ತ್ರದ ಜರ್ನಲ್ಲುಗಳಿಗೆ ಕೆಲವು ಪೇಪರ್‌ಗಳನ್ನು/ ರೀಪೋರ್ಟ್‌ಗಳನ್ನು ಬರೆದು ಪ್ರಕಟಿಸಿದ್ದನ್ನು ಬಿಟ್ಟರೆ ಸಮಾಜಕ್ಕೆ ಏನೂ ಮಾಡಲಿಲ್ಲ. ನನ್ನ ಎಪ್ಪತ್ತು ವರ್ಷಗಳ ಬದುಕನ್ನು ನನ್ನ ಸ್ವಾರ್ಥಕ್ಕಾಗಿಯೇ ಬದುಕಿದೆನೇ ವಿನಹಃ ನನ್ನಿಂದ



## ಹಸಿರೆಲೆಗೆ

ಇಬ್ಬನಿಯ ಚುಂಬನಕೆ
ಪುಳಕಗೊಂಡ
ಹಸಿರೆಲೆಗೆ

ಬಿರುಬಿಸಿಲಲಿ
ಬೇಯುವ
ಅನಿವಾರ್ಯತೆ

—ಮಾಲತಿ ಪೈ